PW- 1 ವೆಂಕಟೇಶಪ್ಪ

Date: 13.08.2025

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 2 ರಿಂದ 6 ನೇ ಪ್ರತಿವಾದಿಗಳ ಪರ ಶ್ರೀ ಎ ಎನ್ ವಕೀಲರಿಂದಃ**

ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರವನ್ನು ನಮ್ಮ ವಕೀಲರಿಗೆ ನಾನೇ ನೀಡಿರುತ್ತೇನೆ. ನಾನು ಯಾವುದೇ ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ವಂಶವೃಕ್ಷವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಾನು ಸಲ್ಲಿಸಿದ ವಂಶವೃಕ್ಷದಲ್ಲಿ ಕಾಣಿಸಿರುವ ಮೂಲ ಪುರುಷ ಗಂಗಪ್ಪ ರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಗಂಗಪ್ಪ ರವರ ಸಹೋದರರು ಎಷ್ಟು ಜನ ಇದ್ದರು ಎಂದು ನನಗೆ ಗೊತ್ತಿಲ್ಲ. ಗಂಗಪ್ಪ ರವರ ಸಹೋದರಿಯರ ಹೆಸರು ಕೂಡ ನನಗೆ ಗೊತ್ತಿಲ್ಲ. ಗಂಗಪ್ಪ ರವರ ಮಕ್ಕಳ ಹೆಸರುಗಳನ್ನು ನಾನೇ ನನ್ನ ತಂದೆಯಿಂದ ತಿಳಿದುಕೊಂಡಿದ್ದೆನು. ವಂಶವೃಕ್ಷಕ್ಕೆ ಪೂರಕವಾಗಿ ಯಾವುದೇ ಕಂದಾಯ ದಾಖಲಾತಿಗಳು ಇರುವುದಿಲ್ಲ. ಸದರಿ ಗಂಗಪ್ಪ ರವರಿಗೆ ಯಾವ ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಗಂಗಪ್ಪ ರವರ ಮಕ್ಕಳಿಗೆ ಬಂದ ಆಸ್ತಿಗಳ ಬಗ್ಗೆ ಮಾತ್ರ ನನಗೆ ಮಾಹಿತಿ ಇದೆ ಎಂದು ನುಡಿದಿರುತ್ತಾರೆ. ಗಂಗಪ್ಪ ರವರ ಮಕ್ಕಳಿಗೆ ಮಾತ್ರ ಆಸ್ತಿಗಳು ಮಂಜೂರಾಗಿದ್ದವು. ಗಂಗಪ್ಪ ರವರ ಸಹೋದರರ ಹೆಸರು ಕುಂದುರ್ಪಯ್ಯ ಎಂದರೆ ನನಗೆ ಗೊತ್ತಿಲ್ಲ. ಆದರೆ ಕುಂದುರ್ಪಯ್ಯ ರವರ ಮಕ್ಕಳ ಹೆಸರು ಒಬಳೇಶಪ್ಪ ಮತ್ತು ಹನುಮಂತಪ್ಪ ಎಂದು ನನಗೆ ನನ್ನ ತಂದೆಯಿಂದ ತಿಳಿದಿದೆ. ಸದರಿ ಒಬಳೇಶಪ್ಪ ರವರ ಮಗಳು ಗಂಗಮ್ಮ ಎಂದರೆ ಸಾಕ್ಷಿ ಅವರು ದೊಡ್ಡ ಹನುಮಂತಪ್ಪ ಅಲಿಯಾಸ್ ಹನುಮಂತಪ್ಪ ರವರ ಮಗಳು ಎಂದು ನುಡಿದಿರುತ್ತಾರೆ. ಸದರಿ ಗಂಗಮ್ಮ ರವರ ಗಂಡನ ಹೆಸರು ಓಬಯ್ಯ ಎಂದರೆ ಸರಿ. ಅವರ ಮಗನ ಹೆಸರು ರಾಮದಾಸ ಎಂದರೆ ಸರಿ. ದಾವಾ ಸ್ವತ್ತುಗಳು ಒಬಳೇಶಪ್ಪ @ ಒಬಳೇಶಯ್ಯ ರವರಿಗೆ ಸೇರಿದೆ ಎಂದರೆ ಸರಿ. ದಾವಾ ಸ್ವತ್ತು ಸದರಿ ಒಬಳೇಶಪ್ಪ @ ಒಬಳೇಶಯ್ಯ ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಸ್ವತ್ತು ಒಬಳೇಶಪ್ಪ @ ಒಬಳೇಶಯ್ಯ ರವರಿಗೆ ದರಕಾಸ್ತಿನಲ್ಲಿ ಮಂಜೂರಾಗಿತ್ತು ಎಂದರೆ ಸರಿ. ಅವರ ಹೆಸರಿನಲ್ಲಿ ಮಂಜುರಾದ ಕಾರಣ ಕಂದಾಯ ದಾಖಲಾತಿಗಳಲ್ಲಿ ಒಬಳೇಶಯ್ಯ ಬಿನ್ ಕುಂದುರ್ಪಯ್ಯ ರವರ ಹೆಸರು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. 1959 ರಲ್ಲಿ ಸದರಿ ಒಬಳೇಶಯ್ಯ ರವರು ರಾಮದಾಸ (Minor guardian ಗಂಗಮ್ಮ ರವರಿಗೆ) ದಾನ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ಸದರಿ ಪತ್ರ ನೋಂದಣಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನೋಂದಣಿ ಸಮಯದಿಂದ ಈವರೆಗೆ ದಾವಾ ಸ್ವತ್ತಿಗೆ ಸಂಬಂದಿಸಿದ ಕಂದಾಯ ದಾಖಲಾತಿಗಳು ರಾಮದಾಸ ರವರ ಹೆಸರಿನಲ್ಲಿಯೇ ಬರುತ್ತಿದ್ದವು ಎಂದರೆ ನನಗೆ ಗೊತ್ತಿಲ್ಲ. ರಾಮದಾಸ ವಯಸ್ಕನಾದ ನಂತರ ಆತನ ಒಂಟಿ ಹೆಸರಿನಲ್ಲಿಯೇ ದಾವಾ ಸ್ವತ್ತಿನ ಕಂದಾಯ ದಾಖಲಾತಿಗಳು ಬರುತ್ತಿದ್ದವು ಎಂದರೆ ನನಗೆ ಗೊತ್ತಿಲ್ಲ. 2016 ರಲ್ಲಿ ಸದರಿ ರಾಮದಾಸ ರವರು ಮರಣ ಹೊಂದಿದರು ಎಂದರೆ ಸರಿ. ರಾಮದಾಸ ರವರ ಜೀವಿತಾ ಅವಧಿಯಲ್ಲಿ ಅವರ ಹಾಗೂ ಅವರ ಮಕ್ಕಳ ನಡುವೆ 2009 ರಲ್ಲಿ  ಪಾಲುವಿಭಾಗ ಆಯಿತು ಎಂದರೆ ನನಗೆ ಗೊತ್ತಿಲ್ಲ. ಪಾಲುವಿಭಾಗವಾದ ನಂತರ ಸದರಿ ಸ್ವತ್ತುಗಳು ರಾಮದಾಸ ರವರ ಮಕ್ಕಳ ಹೆಸರಿನಲ್ಲಿ ಬರುತ್ತಿದ್ದವು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರು ಮೋಸದಿಂದ ಮಾಡಿಕೊಂಡಿದ್ದಾರೆ ಎಂದು ನುಡಿದಿರುತ್ತಾರೆ. ಗಂಗಪ್ಪ ರವರ ಯಾವ ಮಕ್ಕಳು ಕೂಡ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಯಾವುದೇ ದಾವೆಯನ್ನು ಹೂಡಿರುವುದಿಲ್ಲ ಎಂದರೆ ಸರಿ. ಅವರುಗಳು ದಾವಾ ಸ್ವತ್ತಿನ ಖಾತೆ ಬದಲಾವಣೆ ಕಾಲದಲ್ಲಿ ಕಂದಾಯ ಅಧಿಕಾರಿಗಳಿಗೆ ಯಾವುದೇ ತಕರಾರನ್ನು ಸಲ್ಲಿಸಿರಲಿಲ್ಲ. ಈ ಹಿಂದೆ ನಾವುಗಳು ಯಾವುದೇ ಇತರೆ ದಾವೆಯನ್ನು ಪ್ರತಿವಾದಿಗಳ ವಿರುದ್ದ ಹೂಡಿರುವುದಿಲ್ಲ. ದಾವಾ ಸ್ವತ್ತು ಮೂಲತಃ ಒಬಳೇಶಪ್ಪ ರವರಿಗೆ ಸೇರಿದ ಆಸ್ತಿ ಆಗಿದ್ದ ಕಾರಣಕ್ಕಾಗಿ ಗಂಗಪ್ಪನ ಯಾವುದೇ ಮಕ್ಕಳು ಈ ಹಿಂದೆ ದಾವೆಯನ್ನು ಹೂಡಿರಲಿಲ್ಲ ಎಂದರೆ ಸರಿಯಲ್ಲ. ವಂಶವೃಕ್ಷ ಅಪೂರ್ಣವಾಗಿದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿರುವ ಕಾಲು ದಾರಿಯ ಬಗ್ಗೆ 2002 ರಲ್ಲಿ ಗಲಾಟೆಯಾಗಿತ್ತು ಎಂದರೆ ಸರಿ. ಮೇಷ್ಟ್ರು  ಮಲ್ಲಪ್ಪ ರವರು ಸದರಿ ಗಲಾಟೆಯನ್ನು ಮಾಡಿದ್ದರು. ಸದರಿ ಸಮಯದಲ್ಲಿ ನಾವು ತಹಶೀಲ್ದಾರ್ ರವರಿಗೆ ಗಲಾಟೆ ಮಾಡಿದ ವ್ಯಕ್ತಿಯ ವಿರುದ್ದ ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿ ನಾವು ಕೂಡ ಗಲಾಟೆಯಾದಾಗ ಹೋಗಿದ್ದೆವು ಎಂದು ನುಡಿದಿರುತ್ತಾರೆ. ಸದರಿ ಸಮಯದಲ್ಲಿ ರಾಮದಾಸಪ್ಪ ರವರೆ ಪ್ರಕರಣವನ್ನು ನಡೆಸಿದ್ದರು ಎಂದರೆ ಸರಿ. ನಿಪಿ 7  ರಲ್ಲಿ 10 ನೇ ಕಲಂ ನಲ್ಲಿ ಪಿತ್ರಾರ್ಜಿತ ಎಂದು ನಮೂದು ಆಗಿರುವ ಕಾರಣ ಈ ದಾವೆಯನ್ನು ನಾನು ಹೂಡಿದ್ದೇನೆ ಎಂದರೆ ಸರಿ. ದಾವಾ ಸ್ವತ್ತು ಪಿತ್ರಾರ್ಜಿತ ಎಂದು ತೋರಿಸಲು ನನಗೆ ಸದರಿ ಪಹಣಿ ಪತ್ರಿಕೆ ಮಾತ್ರ ಇರುತ್ತದೆ ಬೇರೆ ಯಾವುದೇ ದಾಖಲಾತಿ ಇರುವುದಿಲ್ಲ.  ಸನಂ.130/1 ರಿಂದ 130/6 ರವರೆಗೆ ಪೋಡು ಆಗಿದೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತಿನ ಪೂರ್ವ ಭಾಗದ ಆಸ್ತಿಯನ್ನು ಉಳುಮೆ ಮಾಡುತ್ತಿದ್ದೇನೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿ ಇರುವುದಿಲ್ಲ. ದಾವಾ ಸ್ವತ್ತಿನಲ್ಲಿ ನಾನು ಯಾವ ಕಾಲಕ್ಕೂ ಉಳುಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ವಂಶವೃಕ್ಷವನ್ನು ಈ ದಾವೆಯನ್ನು ಸಲ್ಲಿಸಲು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇರದಿದ್ದರು ಕೂಡ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನಾಗಲಿ ಗಂಗಪ್ಪ ರವರ ಎಲ್ಲಾ ಮಕ್ಕಳಾಗಲಿ ದಾನ ಪತ್ರವನ್ನು ಯಾವ ಕಾಲಕ್ಕೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾನ ಪತ್ರದ ಬಗ್ಗೆ ನಮಗೆ ಗೊತ್ತೆ ಇರಲಿಲ್ಲ ಎಂದು ನುಡಿದಿರುತ್ತಾರೆ. ಸದರಿ ಆಸ್ತಿ ಓಬಳೇಶಯ್ಯ ರವರಿಗೆ ಸೇರಿದ ಆಸ್ತಿಯಾಗಿದ್ದು ತದನಂತರದಲ್ಲಿ ಕಂದಾಯ ದಾಖಲಾತಿಗಳು ರಾಮದಾಸ ರವರ ಹೆಸರಿನಲ್ಲಿ ಇದ್ದ ಕಾರಣ ನಾವು ಯಾವ ಕಾಲಕ್ಕೂ ದಾನ ಪತ್ರವನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ರಾಮದಾಸ ರವರಿಗೆ ಸೇರಿದ ಆಸ್ತಿಗಳನ್ನು ಕಬಳಿಸಲು ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ